**(ದಿಃ18.02.2026 ರ ಮಧ್ಯಂತರ ಅರ್ಜಿ ಸಂಖ್ಯೆ 6 ಮತ್ತು 7 ರ ಮೇಲೆ ಆದ ಆದೇಶದ ಅನ್ವಯ)**

**ಸಾಕ್ಷಿಗೆ ದಿನಾಂಕಃ06-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. GNC ವಕೀಲರಿಂದ ::**

ದಾವಾ ಶೆಡ್ಯೂಲ್ ಸ್ವತ್ತು ಮೂಲತಃ ಬಸಪ್ಪ ರವರಿಗೆ ಸೇರಿರುತ್ತದೆ ಎಂದರೆ ಸರಿ. ಬಸಪ್ಪ ರವರ ಮರಣ ನಂತರ ಅವರ ಪತ್ನಿ ಮಲ್ಲಮ್ಮನ ಹಸೆರಿಗೆ ಅದರ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅವರ ಮರಣ ನಂತರ ಸದರಿ ದಂಪತಿಗಳ ಮಗಳಾದ ಸಾವಿತ್ರಮ್ಮ ರವರ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ಸಾವಿತ್ರಮ್ಮ ರವರಿಗೆ ಸಂಬಂಧಪಟ್ಟಿದಾಗಿರುವುದಿಲ್ಲ. ದಾವಾ ಶೆಡ್ಯೂಲ್ ಸ್ವತ್ತು ಹಿಂದೆ ಯಾವತ್ತು ಸಹ ಸಾವಿತ್ರಮ್ಮ ರವರ ಹೆಸರಿನಲ್ಲಿ ಇರಲಿಲ್ಲ. ದಾವಾ ಶೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಗಂಗಾಧರಪ್ಪ, ಚಂದ್ರಪ್ಪ, ಶಿವಮೂರ್ತಪ್ಪ ಮತ್ತು ದೇವಿರಣ್ಣ ರವರು 1975-76 ರಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ಸಮಯದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯು ಸಾವಿತ್ರಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಡಿ1 ವಿಭಾಗ ಪತ್ರ ಯಾರ ಮಧ್ಯೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ವಿಭಾಗ ಪತ್ರದ ಆಧಾರದಲ್ಲಿ ಯಾವುದೇ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿ ನನ್ನ ಮಾವನ ಹೆಸರಿಗೆ ಬಂದಿರುತ್ತದೆ. ದಾವಾ ಆಸ್ತಿ ನನ್ನ ಮಾವನ ಹೆಸರಿಗೆ ಬಂದಿರುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ1 ಮತ್ತು 2 ದಾಖಲಾತಿಗಳು ಆಗುವ ಸಮಯದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಸಾವಿತ್ರಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಎಸಿ ನ್ಯಾಯಾಲಯದಲ್ಲಿ ನಾನು ಪ್ರಕರಣವನ್ನು ನನ್ನ ಮಾವನ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು ಹೂಡಿರುತ್ತೇನೆ. ಸದರಿ ಸಮಯದಲ್ಲೂ ಸಹ ದಾವಾ ಶೆಡ್ಯೂಲ್ ಸ್ವತ್ತಿನ ಹಾತೆ ಸಾವಿತ್ರಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ವಾದಿ ಹಾಗೂ ನಮ್ಮ ಕುಟುಂಬ ಬೇರೆ ಬೇರೆ ಆಗಿರುತ್ತದೆ ಎಂದರೆ ಸರಿ. ದಾವಾ ಶೆಡ್ಯೂಲ್ ಸ್ವತ್ತಿನ ಹಾತೆ ಮೊದಲಿನಿಂದ ಸಾವಿತ್ರಮ್ಮ ರವರ ಹೆಸರಿನಲ್ಲಿ ಇರುವ ಕಾರಣ ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: